## ರಂಜಿಸಿದ ಕುಟುಂಬ ಅವಾರ್ಡ್ಸ್

ವಾರಾಂತ್ಯದಲ್ಲಿ ಝೀ ಕನ್ನಡದ 'ಕುಟುಂಬ ಅವಾರ್ಡ್ಸ್' ಕಾರ್ಯಕ್ರಮ ಅದ್ಭುತವಾಗಿತ್ತು. ಮಕ್ಕಳು ಪ್ರದರ್ಶಿಸಿದ ಗುರು ರಾಘವೇಂದ್ರರ ಪ್ರಹಸನ, ನಟ ಉಪೇಂದ್ರ ಅವರ ವೈವಿಧ್ಯ ಪಾತ್ರಗಳ ಪುನರ್ ಸೃಷ್ಟಿ , ಶಿವಣ್ಣನಿಗೆ ರಕ್ಷಾಬಂಧನ, ನಿರೂಪಕಿ ಅಪರ್ಣಾ ಅವರಿಗೆ ಶ್ರದ್ಧಾಂಜಲಿ ಅರ್ಪಿಸಿದ್ದು ಸೊಗಸಾಗಿತ್ತು. ಹಾಸ್ಯನಟಿ ಪ್ರಶಸ್ತಿ ಹಿರಿಯ ಚೇತನ ಎಂ.ಎನ್. ಲಕ್ಷ್ಮಿದೇವಿ ಅವರಿಗೆ ಕೊಟ್ಟಿದ್ದು, ಭರ್ಜರಿ ನೃತ್ಯಗಳು ಬಹುಕಾಲ ಮರೆಯಲಾಗದ ಅನುಭವ ಉಂಟುಮಾಡಿತು.

—ಕೆ. ಶ್ರೀನಿವಾಸರಾವ್, ಹರಪನಹಳ್ಳಿ

## ಮುಖ್ಯ ಪಾತ್ರಗಳೇ 'ದೃಷ್ಟಿ'ಬೊಟ್ಟು

ಕಲರ್ಸ್ ಕನ್ನಡದ 'ದೃಷ್ಟಿ ಬೊಟ್ಟು' ಧಾರಾವಾಹಿಯಲ್ಲಿ ಮುಖ್ಯ ಪಾತ್ರಧಾರಿಗೆ ಮಸಿ ಬಳಿದು ದೃಷ್ಟಿಯಾಗದಂತೆ ಮಾಡಿದ್ದಾರೆ. ಇನ್ನು ನಾಯಕನಿಗೆ ದಾದಾ ರೀತಿಯ ದೇಹ ಭಾಷೆ ನೀಡಿದ್ದಾರೆಯೇ ಹೊರತು, ಆಕರ್ಷಕ ಸಂಭಾಷಣೆ ಕಾಣುತ್ತಿಲ್ಲ. ನಾಯಕಿಯ ತಂದೆ ತಾಯಿ ಪಾತ್ರಗಳಂತೂ ನಗೆಪಾಟಲಿನಂತಿವೆ. ಒಟ್ಟಿನಲ್ಲಿ ಇಡೀ ಧಾರಾವಾಹಿಯ ಮುಖ್ಯ ಪಾತ್ರಗಳೇ ಕಥಾ ನಿರೂಪಣೆಗೆ ದೃಷ್ಟಿ ಬೊಟ್ಟಿನಂತಿದೆ.

—ಕೆ.ಎಸ್. ಸೋಮೇಶ್ವರ, ಬೆಂಗಳೂರು

## ಸಾಂಕೇತಿಕ ರೂಪವೇ ಸಾಕಿತ್ತು!

ಝೀ ಕನ್ನಡದ 'ಬ್ರಹ್ಮಗಂಟು'ನಲ್ಲಿ ಜಯರಾಮ್ ಅವರ ಪುತ್ರ ನರಸಿಂಹ ತನ್ನ ಸ್ನೇಹಿತರ ಜೊತೆ ಮದ್ಯಪಾನ ಮಾಡುತ್ತಿರುತ್ತಾನೆ. ಕಥೆಗೆ ತಕ್ಕಂತೆ ಕುಡಿಯುವ ಆ ದೃಶ್ಯ ಸಾಂಕೇತಿಕವಾಗಿ ಮಾಡಬಹುದಿತ್ತು. ಆದರೆ ಮದ್ಯಪ್ರೇಮಿಗಳು ಪರಸ್ಪರ ಒಬ್ಬರ ಬಾಟಲಿಯನ್ನು ಇನ್ನೊಬ್ಬರಿಗೆ ಕುಡಿಸುವುದು ಅತಿರೇಕದ ನಡವಳಿಕೆ. ಅದೆಲ್ಲ ಅನವಶ್ಯಕ ಎನಿಸಿತು. ಜನರನ್ನು ದಾರಿ ತಪ್ಪಿಸುವ ಮತ್ತು ದುಷ್ಪರಿಣಾಮ ಬೀರುವ ಇಂತಹ ಸನ್ನಿವೇಶಗಳು ಇರಬಾರದು. ಇಂತಹ ದುಷ್ಟಟಗಳಿಗೆ ಕಡಿವಾಣ ಅವಶ್ಯ.

—ಸಿ.ಕೆ. ಗಣಪ್ಪನವರ, ಮುಂಡರಗಿ

ವಾರದ ಪತ್ರ

## ಸಾಂಸಾರಿಕ ಜಂಜಾಟದಲ್ಲಿ ಜಿಲ್ಲಾಧಿಕಾರಿ!

ಝೀ ಕನ್ನಡದ 'ಪುಟ್ಟಕ್ಕನ ಮಕ್ಕಳು' ಧಾರಾವಾಹಿಯಲ್ಲಿ ಸ್ನೇಹಾ ಜಿಲ್ಲಾಧಿಕಾರಿ ಆಗಿರುವುದು ಸಾಧನೆಯೇ ಸರಿ. ನೇಮಕ ಆದ ಕ್ಷಣದಿಂದ ಅವರು ಮಾಡಿದ ಒಂದೇ ಘನ ಕಾರ್ಯ ಏನೆಂದರೆ, ತನ್ನ ತಾಯಿ ಮತ್ತು ಗಂಡನ ಮನೆಯ ತರಲೆ ತಾಪತ್ರಯಗಳನ್ನು ಬಗೆಹರಿಸುವುದು. ಅಪ್ಪಿತಪ್ಪಿಯೂ ಜಿಲ್ಲಾಧಿಕಾರಿ ಕಚೇರಿ ಕಡೆ ಗಮನ ಕೊಡುವುದೇ ಇಲ್ಲ.

ಜಿಲ್ಲೆಯ ಬಗ್ಗೆ ಕಿಂಚಿತ್ತಾದರೂ ಗಮನ ಹರಿಸಬಹುದಿತ್ತು. ತಮ್ಮ ಸಿಬ್ಬಂದಿಯ ಜೊತೆ ತೋರಿಕೆಗಾದರೂ ಒಂದು ಮೀಟಿಂಗ್ ಮಾಡುವುದಿಲ್ಲ. ತಮಾಷೆ ಅಂದ್ರೆ ಈ ಜಿಲ್ಲಾಧಿಕಾರಿಯನ್ನು ಪೊಲೀಸ್ ಅಧಿಕಾರಿಯಂತೆ ಬಿಂಬಿಸಲಾಗುತ್ತಿದೆ. ಜಿಲ್ಲಾ ದಂಡಾಧಿಕಾರಿಗಳ ಕಾರ್ಯವೈಖರಿಯನ್ನು ಪರಿಚಯಿಸಿ ವೀಕ್ಷಕರಿಗೂ ತಿಳಿವಳಿಕೆ ಮೂಡಿಸಬಹುದಿತ್ತು.

ನಾಯಕ ಕಂಠಿ ಪೆದ್ದುಪೆದ್ದಾಗಿ ಮಿಸ್ಸು ಮಿಸ್ಸು ಅಂತ ತಿರುಗುವುದೇ ಆಯಿತು. ಒಂದು ರೀತಿಯಲ್ಲಿ ಅವನೇ ಅಫೀಶಿಯಲ್ ಕಾರ್ಯದರ್ಶಿ ಆಗಿದ್ದಾನೆ. ಪೊಲೀಸ್ ಅಧಿಕಾರಿಗಳನ್ನು ನೋಡಿದರೆ ಅಯ್ಯೋ ಪಾಪ ಎನಿಸದೇ ಇರದು. ಪುಟ್ಟಕ್ಕನ ಪಾತ್ರದ ಉಮಾಶ್ರೀ ಮತ್ತು ದ್ವಿಪಾತ್ರ ಮಾಡುತ್ತಿರುವ ಮಂಜುಭಾಷಿಣಿಯ ಅಭಿನಯ ನಿಜಕ್ಕೂ ಚೆನ್ನಾಗಿದೆ.

—ಆರ್. ವೀರೇಶ್ ಕುಮಾರ್, ಬೆಂಗಳೂರು

## ಮಾತುಗಳು ಶೋಭೆಯಲ್ಲ

ಝೀ ಕನ್ನಡದ 'ಅಮೃತಧಾರೆ' ಉತ್ತಮವಾಗಿ ಮೂಡಿ ಬರುತ್ತಿದೆ. ಗೌತಮ್ ಪಾತ್ರಧಾರಿ ರಾಜೇಶ್ ಅವರು ಪಾತ್ರಕ್ಕೆ ಜೀವಕಳೆ ತುಂಬಿದ್ದಾರೆ. ಮುಖದ ಭಾವನೆ ಮತ್ತು ನಟನೆಯಲ್ಲಿ ನೈಜತೆ ತೋರಿದ್ದಾರೆ. ಮನೆ ಯಜಮಾನನ ಗೌರವಯುತ ಪಾತ್ರದಲ್ಲಿ ಮಿಂಚಿದ್ದಾರೆ. ಈ ಪಾತ್ರಕ್ಕೆ ಕುಡಿದ ಮತ್ತಿನ ಮಾತುಗಳು ಶೋಭಿಸುತ್ತಿಲ್ಲ.

—ಕೆ.ಎಲ್. ಭಾರತಿ, ತುಮಕೂರು

## ಡಮರುಗದ ಹೊಸ ನಾದ

ಚಂದನದ 'ಶುಭೋದಯ ಕರ್ನಾಟಕ'ದಲ್ಲಿ ತಬಲಾ ವಾದಕ ಜಗದೀಶ ಕುರ್ತಕೋಟಿ ಅವರ ಪರಿಚಯ ಸೊಗಸಾಗಿ ಮೂಡಿಬಂತು. ಜಗದೀಶ ವೃತ್ತಿಯಿಂದ ಎಂಜಿನಿಯರ್ ಆಗಿದ್ದರೂ ತಬಲಾ ವಾದನದಲ್ಲಿ ಅವರ ಪಾಂಡಿತ್ಯ ಅಮೋಘವಾದುದು. ವಾರಾಣಸಿಯ ವಿಶ್ವನಾಥ ದೇವಸ್ಥಾನದಲ್ಲಿ ಹೊಸ ಆವಿಷ್ಕಾರದ ಅವರ ಡಮರುಗ ನುಡಿಸಿದ ಕಾರ್ಯಕ್ರಮದ ಭಾಗವನ್ನು ತೋರಿಸಿದ್ದು ವಿಶೇಷ ಎಂದೆನಿಸಿತು.

—ಕಮಲಾದೇವಿ ರಾಜಶೇಖರ ಹಳ್ಳೂರ್, ಬೆಂಗಳೂರು



## ಬಿಗ್‌ಬಾಸ್ ಸ್ಪರ್ಧಿಯ 'ಸವಿರುಚಿ' ನಡಿಗೆ

ಕಲರ್ಸ್ ಕನ್ನಡದ 'ಬಿಗ್ ಬಾಸ್' ರಿಯಾಲಿಟಿ ಶೋನಲ್ಲಿ ಶಿಷ್ಟಾಚಾರ ಪಾಲಿಸದ ಕಾರಣಕ್ಕೆ ಜಗದೀಶ್ ಅವರನ್ನು ಸ್ಪರ್ಧೆಯಿಂದ ಹೊರ ಹಾಕಲಾಯಿತು. ಅದಾಗಿ ಕೆಲವೇ ದಿನಗಳಲ್ಲಿ ಅದೇ ವಾಹಿನಿ 'ಸವಿರುಚಿ' ಕಾರ್ಯಕ್ರಮಕ್ಕೆ ಆಹ್ವಾನಿಸಿ ಹಾಡಿ ಹೊಗಳಿದ ಸಂದರ್ಭ ಮುಜುಗರ ಹುಟ್ಟಿಸಿತು. ಅಡುಗೆ ಕಾರ್ಯಕ್ರಮವನ್ನು ರೂಪಿಸುವವರ ಆದ್ಯತೆ ಏನು ಅನ್ನುವುದನ್ನು ಅದು ಸೂಚಿಸುತ್ತದೆ.

—ರಾಜೀವ್ ಮಾಗಲ್, ಹಾಸನ

## ನಿರ್ದೇಶಕ ಎಡವಿದರೆ?

ಝೀ ಕನ್ನಡದ 'ಸೀತಾ ರಾಮ'ದಲ್ಲಿ ರುದ್ರ ಪ್ರತಾಪ್ ತಾನು ಮಾಡಿದ ಘನ ಕಾರ್ಯವನ್ನು ಭಾರ್ಗವಿಗೆ ಫೋನ್ ಮಾಡಿ ತಿಳಿಸುತ್ತಾನೆ. ಆಮೇಲೆ ಸೀತಾ ಹಾಗೂ ಅವನು ಹೊಡೆದಾಡಿಕೊಂಡು ಬೀಳುತ್ತಾರೆ. ಕೆಲವೇ ಕ್ಷಣಗಳಲ್ಲಿ ಚಾಂದನಿ ಬಂದು ಸಿಹಿಯನ್ನು ಎತ್ತಿಕೊಂಡು ಹೋಗುತ್ತಾಳೆ. ಭಾರ್ಗವಿಗಾಗಲಿ ಚಾಂದನಿಗಾಗಲಿ ಹೊಡೆದಾಡಿದ ಜಾಗ ಹೇಗೆ ಗೊತ್ತಾಯಿತು? ನಿರ್ದೇಶಕ ಇಲ್ಲಿ ಎಡವಿದರೆ?

—ಅರುಣ್ ಕೆ.ಎನ್., ಬೆಂಗಳೂರು

## ಜಾಹೀರಾತಿನ ಹೊಸ ರೂಪ

ಜಾಹೀರಾತು ಬಂದ ಕ್ಷಣ ಚಾನಲ್ ಬದಲಾಯಿಸುವವರೇ ಹೆಚ್ಚು. 'ಮೊಸರಿನಲ್ಲಿ ಕಲ್ಲು' ಎಂಬಂತೆ ಎಲ್ಲರಿಗೂ ಅದು ಅಸಹನೀಯ. ಆದರೆ ಧಾರಾವಾಹಿಗೂ ಜಾಹೀರಾತಿಗೂ ಅವಿನಾಭಾವ ಸಂಬಂಧವಿದೆ. ಹಾಗಾಗಿ ವೀಕ್ಷಕರು ಬ್ರೇಕ್‌ನ ಜಾಹೀರಾತುಗಳಿಗೆ ಹೊಂದಿಕೊಂಡಿದ್ದಾರೆ. ಇದನ್ನು ಅರಿತ ಜಾಹೀರಾತುದಾರರು ಹೊಸ ಉಪಾಯವನ್ನು ಕಂಡುಕೊಂಡಿದ್ದಾರೆ. ಕತೆ ಮುಂದುವರಿಯುತ್ತಿರುವಾಗಲೇ ಮಧ್ಯದಲ್ಲಿ ಅನಗತ್ಯ ಸನ್ನಿವೇಶ ಸೃಷ್ಟಿಸಿ ರಸ್ತೆ, ವಾಹನಗಳ ಓಡಾಟದ ದೃಶ್ಯವನ್ನು ತೋರಿಸುತ್ತಾ ಜಾಹೀರಾತುಗಳ ದೊಡ್ಡ ದೊಡ್ಡ ಫಲಕಗಳನ್ನು ಪ್ರದರ್ಶಿಸುತ್ತಿದ್ದಾರೆ.

—ಪುಷ್ಪಾ ಎನ್.ಕೆ. ರಾವ್, ಉಡುಪಿ